೦೮-೦೧-೧೯೯೭ (ಮುಂದುವರೆದುದು)

ಅಜ್ಜ – ಹಾಗಾದರೆ ಕಳುಹಿಸಿದವ ಬೇರೆ ಅಲ್ಲ, ಕಳುಹಿಸಲ್ಪಟ್ಟವ ಬೇರೆ ಅಲ್ಲ.

ಹಾಗಾದರೆ ಮನಸ್ಸು ಅರಳುವಂಥದ್ದು, ನಾವು ಬಲಾತ್ಕಾರ, ಅದು, ಇದು ಒಂದೂ ಮಾಡಬಾರದು. ಯಾವುದು? ಬಲಾತ್ಕಾರ ಅದು, ಇದು ಒಂದೂ ಸಾಯೋದಿಲ್ಲ. Free ಆಗಿರ್ಬೇಕು. ನಮ್ಮ ಕರ್ತವ್ಯವನ್ನು ಮಾಡುವಂಥದ್ದು. ನಮ್ಮ ದಿನ ನಿತ್ಯದ ಕರ್ಮಗಳನ್ನು ನಾವು ಸರಿಯಾಗಿ ಮಾಡಿ, ಸ್ಮರಣೆಯೊಂದೇ. ನಿನ್ನ ಸ್ಮರಣೆಯೊಂದೇ ಎನಗೆ ಆನಂದವು. ಸ್ಮರಣೆ ಒಳಗಿಂದ. ಅವನೇ ಮಾಡಿಸ್ತಾನೆ ಮತ್ತೆ ಎಲ್ಲ ಕೆಲಸವನ್ನು. ಈ ದೇಹದ ಮೂಲಕ ಯಾವುದು ಕಾರ್ಯಗಳ ಆಗ . . . ಧೈರ್ಯ, ವಿಶ್ವಾಸ ಒಂದೇ ಬೇಕು. ದೃಢ ನಂಬಿಕೆ, ವಿಶ್ವಾಸ ಬೇಕು. ಈ ದೇಹದ ಮೂಲಕ ಯಾವ ಯಾವ ಕೆಲಸಗಳಾಗಬೇಕೋ ಅವ ಮಾಡಿಸ್ತಾನೆ. ದೃಢ ನಂಬಿಕೆ, ವಿಶ್ವಾಸವೇ ಇರುವುದು ಮನಃಶಾಂತಿಗೆ. ಆ ಯಾವುದು ಬೇಕೋ ಅದು ಮಾಡಿಸ್ತಾನೆ ಎಂಬುದು ಸಿದ್ಧಾಂತ. ಎಲ್ಲ ಅವನೇ ಮಾಡಿಸ್ತಾನೆ ಎಂದು ನಾವು ಸೋಮಾರಿಗಳಾಗಬಾರದು. ಕೆಲವು ಜನ ಹೇಳ್ತಾರೆ ಎಲ್ಲ ಅವನೇ ಮಾಡಿಸ್ತಾನೆ, ನಾವು ಸುಮ್ಮನೆ . . . ಅವರವರ ಯೋಗ್ಯತೆಯನ್ನು ನೋಡಿ ಅವನು ವ್ಯವಸ್ಥೆ ಮಾಡ್ತಾನೆ. ಹಾಗಾದರೆ ನಾವು ಕರ್ಮವನ್ನು ಮಾಡ್ಬೇಕು. ಆ ಮಾಡುವಾಗ, ಅವನೇ ನನ್ನಿಂದ ಮಾಡಿಸ್ತಾನೆ ಎಂಬ ವಿಶ್ವಾಸ, ಧೈರ್ಯ, ನಂಬಿಕೆ ಇಟ್ಟು ಮಾಡ್ಬೇಕು. ಆ್ಞಂ! ಅವ ಒಳಗಿದ್ದಾನೆ. ಆ ಶಕ್ತಿ ಇರುವಾಗ ದೇಹದ, ಏನೊಂದೂ ಜಡವೇ ಆಯ್ತಲ್ಲ. ಆ ಶಕ್ತಿಯು ಶಕ್ತಿಯು ಇರದಿದ್ದರೆ ಜಡವೇ ಆಯ್ತು. ಆ ಒಳಗೆ ಇಟ್ಟುಕೊಂಡು ಮನಸ್ಸಿಗೆ ಪ್ರೇರಣೆಯನ್ನು ಕೊಟ್ಟು ಇಂದ್ರಿಯಗಳ ಮೂಲಕ ಕರ್ಮವನ್ನು ಮಾಡಿಸ್ತಾನೆ. ಮುಗಿಯಿತು ಇಲ್ಲಿಗೆ. ದೃಢ ನಂಬಿಕೆ, ವಿಶ್ವಾಸ ಹೃದಯದಲ್ಲಿ ಅವ್ಯಕ್ತ ಶಕ್ತಿ ಇದ್ದಾನೆ ಎಂಬುದಾಗಿ. ನಾವು ಸೋಮಾರಿಗಳಾಗಬಾರದು. ಕರ್ತವ್ಯ ದೃಷ್ಟಿಯಿಂದ ಕರ್ಮವನ್ನು ಮಾಡಿದಾಗ, ಒಂದು ದೇಹ ಪೋಷಣೆ, ಮತ್ತೊಂದು ಆತ್ಮ ಪೋಷಣೆ. ದೇಹ ಬೇಕು. ಅವನಿಗೆ ಇರ್ಲಿಕ್ಕಾಗಿ ದೇಹ ಬೇಕು. ಇದು ಪ್ರಾಧಾನ್ಯವಲ್ಲ. ಅದು ಪ್ರಾಧಾನ್ಯ. ಅದಕ್ಕಾಗಿ ದೇಹ ಬೇಕು. ದೇಹವನ್ನು ಕಾಪಾಡ್ಲಿಕ್ಕಾಗಿ. ಅದಕ್ಕಾಗಿ ದೇಹ ಪೋಷಣೆ ಆಗಬೇಕು. ಅದು ಅವ ಮಾಡಿಸ್ತಾನೆ ಎಂಬ ದೃಢ ನಂಬಿಕೆ, ವಿಶ್ವಾಸ ಒಂದೇ ಕಾರಣ ಇದಕ್ಕೆ. ಅವ ನೀನು. ಅದು ಯಾವುದು? (Blank)

ಪ್ರತಿಯೊಂದು ಧರ್ಮವೂ ಹೇಳುವಂಥದ್ದು ಒಂದೇ. ಬೇರೆ ಬೇರೆ ರೀತಿಯಲ್ಲಿ. ಅದು ಯಾವುದು? ಧರ್ಮ ಎಂದರೇನು? ಮಾನವನಿಗೆ ಮಾತ್ರವಾ ಧರ್ಮ ಇರುವುದು? ಒಂದು ನದಿಗೂ ಧರ್ಮ ಉಂಟು. ಒಂದು ಗಿಡಕ್ಕೂ. ಅದಕ್ಕೂ ಒಂದು ಧರ್ಮ ಉಂಟು. ಅದು ವಿಕಾಸದ ಕಡೆಗೆ ಪ್ರಪಂಚಕ್ಕೆ ಹೋಗ್ತಾ ಉಂಟು. ಒಂದು ಗಿಡ, ಒಂದು ಬಳ್ಳಿ, ಒಂದು ಇದು, ಅದು ವಿಕಾಸದ ಕಡೆಗೆ ಹೋಗ್ತಾ ಉಂಟು. ಅದೇ ರೀತಿಯಲ್ಲಿ ಜೀವಾತ್ಮನೂ ಕೂಡ ಪ್ರಕೃತಿ

ವಿಕಾಸದ ಕಡೆಗೆ ಹೋಗ್ತಾ ಇದ್ದಾನೆ. ಪ್ರಕೃತಿಯ ನಿಯಮ ಉಂಟು. ಆ ನಿಯಮಕ್ಕೆ ಇವ ಒಳಪಟ್ಟಾಗ, ಅದು ತನ್ನಿಂದ ತಾನೇ ಕೊಂಡು ಹೋಗ್ತದೆ. ಆ್ಞಂ! ಆ ನಿಯಮಕ್ಕೆ ನಾವು ಒಳಪಟ್ಟಾಗ, ಅದು ಕೊಂಡು ಹೋಗುತ್ತದೆ. ಇದು ದೃಢ ನಂಬಿಕೆ, ವಿಶ್ವಾಸದಿಂದ ಮಾತ್ರ ಸಾಧ್ಯ.

ಮತ್ತೊಂದು

ಅದಕ್ಕೆ ಆಧಾರವೇನು ಎಂ

ಪ್ರತಿಯೊಂದು ದೇಹದಲ್ಲಿರುವವನು ನಾನು ಅಂತ ಹೇಳ್ತಾನಲ್ಲ. ಅದರಲ್ಲಿ ವಿಶ್ವಾಸ, ನಂಬಿಕೆ ನಮಗೆ ಉಂಟಾ? ಹಾಗಾದರೆ ಆ ಶಕ್ತಿ ಯಾವುದು? ಮತ್ತೊಂದು ರೂಪ. ಆ ರೂಪವು ಪರಿವರ್ತನೆ ಹೊಂದಿದಾಗ ಅವನ ಹಾಗೆ ಆದ. ಅಲ್ಲಿ ಅವ ದಾರಿ ತೋರಿಸ್ತಾನೆ. ಬೆಳಕಿನ ಕಡೆಗೆ ನನ್ನನ್ನು ಕೊಂಡು ಹೋಗು. ಅಲ್ವ? ಇವನನ್ನು ಅವ ಕೊಂಡು ಹೋಗ್ತಾನೆ ಬೆಳಕಿನ ಕಡೆಗೆ. ದಾರಿ ತೋರಿಸ್ತಾನೆ.

೦೯-೦೧-೧೯೯೭

ಅಜ್ಜ – ಅವನ ಅವತಾರ ನೋಡುವಾಗ ಏನಾಗ್ತದೆ. ಆಶ್ಚರ್ಯ ಆಗ್ತದೆ.

ಕೆಲವರೆಲ್ಲ ಕಲ್ಕಿ ಪವಾಡದ ಬಗ್ಗೆ ಮಾತನಾಡಿ ಅಜ್ಜನ ಅಭಿಪ್ರಾಯವನ್ನು ಕೇಳುತ್ತಾರೆ.

ಅಜ್ಜ – ನಮ್ಮ ಅಭಿಪ್ರಾಯ ಏನೂಂತ ಕೇಳುವುದಾ ನೀವು? ಈಗ ನಾನು ಕಲ್ಕಿ ಅವತಾರ ಅಂತ ಹೇಳೋದು ಯಾರು? ಅವ ಹೇಳ್ತಾನೆ. ಅಲ್ಲ? ಆಮೇಲೆ ಅವನ ಶಿಷ್ಯರು ಅವರು ಹೇಳ್ಬಹುದು. ಮುಖ್ಯ ಅವನೇ ಹೇಳಿದ್ದು ನಾನು ಕಲ್ಕಿ ಅವತಾರ ಅಂತ ಹೇಳಿ. ಅದು ಅವನಿಗೇ ಬಿಟ್ಟು ಕೊಡುವ. ಅದು ಅವನಿಗೇ ಬಿಟ್ಟುಕೊಡುವ ಅಂತ್ಹೇಳಿ. ಅವ ಹೇಳಿದ್ದು ಸರಿ ಅಲ್ವ? ಅದು ಅವ ಹೇಳಿದ್ದು ಸರಿ. ಅದು ಅವನ ಮಾತು. ಯಾವುದು? ಅದು ಅವನಿಗೇ ಬಿಟ್ಟುಕೊಡುವ.

ರಾಧಿಕ – ಅಪ್ಪ, ಅಮ್ಮಂದಿರು ಮನಸೋತು ಅವರ ಮಕ್ಕಳನ್ನು ದಾನವಾಗಿ ಕೊಡ್ತಿದ್ದಾರೆ.

ಒಬ್ಬರು – ನಾವು ಯಾರಾದರೊಬ್ಬರು complaint ಕೊಟ್ಟುಬಿಟ್ಟರೆ, parents permission ಇಲ್ಲದೆ,

ಅಜ್ಜ – ಅದು ಒಂದು ದಿವಸ ಹೊರಗೆ ಬರ್ತದೆ. ಅದಕ್ಕೆ ನಾವು ಹೇಳ್ತದೆ, ಅದು ಸತ್ಯವೋ, ಅಸತ್ಯವೋ ಯಾವುದೋ ಹೊರಗೆ ಬರ್ಲೇ ಬೇಕಲ್ವ. ಇದು ಒಬ್ಬ ನಿಜವಾದ ಅವತಾರ ಪುರುಷನಾದರೆ ಅವ ಅವತಾರ ಪುರುಷ ಅಂತ್ಹೇಳಿ ಹೇಳ್ಬೇಕೂಂತ ಇಲ್ಲ. ಎಲ್ರೂ ಕಂಡು ಹಿಡೀತಾರೆ. ಅ್ಞಂ!

ಒಬ್ಬರು – ಅವರು ಹೇಳ್ತಾರೆ ಒಳಗಡೆಯಿಂದಲೇ ಬರ್ತದಂತೆ.

ಅಜ್ಜ – ಆಗಿರಬಹುದಪ್ಪ.

(ಪವಾಡದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ)

ಅಜ್ಜ – ಆತ್ಮ ಸಾಕ್ಷಾತ್ಕಾರಕ್ಕೆ, ಆಧ್ಯಾತ್ಮಕ್ಕೆ ಹೋಗುವಾಗ ಈ ಪವಾಡಗಳು ಬಂದು ಸೋಹಂ ಭಾವನೆ ಪವಾಡಗಳು ಬರ್ತದೆ. ಅದಕ್ಕೆ ಅವ ಒಳಗಾದಾಗ ಅವನು ಹಣ ಸಂಪಾದನೆ ಮಾಡಬಹುದು. ಜನರಿಂದ ಹೆಸರು ಕೀರ್ತಿ ಗಳಿಸಬಹುದು. ಆದರೆ ಆತ್ಮ ಸಾಕ್ಷಾತ್ಕಾರಕ್ಕೆ ಇದು ವಿರೋಧ. ಅಷ್ಟೇ ಹೇಳ್ತದೆ ನಾವು. ಮತ್ತೆ ನಮಗೆ ಗೊತ್ತಿಲ್ಲ. ಅಂಥದ್ದುಂಟು. ಆದರೆ, ಆಚೆಗೆ ಹೋಗುವಾಗ ಇದು ಅಡ್ಡ ಬರಬಹುದು. ಅದಕ್ಕೆ ಇವ ಒಳಗಾದಾಗ ಅದು ಸಾಧ್ಯತೆ ಉಂಟು. ಆದರೆ ಸತ್ಯಕ್ಕೆ ವಿರೋಧ ಅದು. ನಮಗೆ ಹಾಗೆ ಬರ್ತದೆ. ಸತ್ಯಕ್ಕೆ ವಿರೋಧ ಅಂತ ಹೇಳಿ. ನಿರ್ಗುಣ, ನಿರಾಕಾರ ಅಲ್ಲಿ ಅವತಾರವೂ ಇಲ್ಲ, ಯಾವುದೂ ಇಲ್ಲ. ಮೂಲದಲ್ಲಿ. ಅವತಾರ ಅದು, ಇದು, ಎಲ್ಲ ಈಚೆಗೆ. ಅಲ್ಲಿ ಯಾವುದೂ ಇಲ್ಲ. ಇರಬಹುದು. ನಾವು ಅವರಿಗೇ ಬಿಟ್ಟುಕೊಡುವ. ಹೌದು. ಅವರ ಮನ ನೋಯಿಸುವುದು ಬೇಡ ನಾವು ಅಲ್ಲ? ಅವರಿಗೇ ಬಿಟ್ಟುಕೊಡುವ.

ಅಂದ್ರೆ ಆ ಗುರುವನ್ನು ಕಾಣಬೇಕೆಂದು ಅವನಲ್ಲಿ ಆ ಒಂದು (ಉದಯ) ಇರಬೇಕಾದರೆ ಗುರು ಒಳಗಿದ್ದಾನೆ ಅಂತ ನಮಗೆ ಗೊತ್ತು. ಅರ್ಥವಾಗ್ಲಿಲ್ವ? ಬೇಕು ಅಂತ್ಹೇಳಿಕಾಗ್ಲಿಕ್ಕೆ ಅಲ್ಲಿ ಒಬ್ಬ ಇದ್ದಾನಲ್ಲ. ಅವ ಯಾರು? ಸಿಕ್ಕುವುದು ಅವ. ಹೌದು. ನಿಮ್ಮ ಮನಸ್ಸಿಗೆ ಅದು ಉದಯ ಆಯ್ತಲ್ಲ. ಅದೆಲ್ಲಿಂದ ಆಯ್ತು ಹೇಳಿ. ಅದು ಹೇಳಿ. x x x x x x ಹೊರಗಿನ ಗುರು ಪ್ರಾಮುಖ್ಯವಲ್ಲ. ಅಲ್ಲ, ಈಗ ಒಳಗೆ ಉತ್ಪತ್ತಿ ಆಯ್ತಲ್ಲ, ಉತ್ಪತ್ತಿ ಆ ಮೂಲವನ್ನು ನೋಡಿ ನೀವು. ಎಲ್ಲುಂಟು ಅಂತ ಹೇಳಿ ಈಗ. ಅಲ್ಲಿ ಇರುವವನೇ ಇಲ್ಲಿ ಇರುವಂಥಾದ್ದು. ಇಲ್ಲಿ ಇರುವವನೇ ಅಲ್ಲಿ ಇರುವಂಥಾದ್ದು. ಒಂದೇ ಶಕ್ತಿ. ಕೃಷ್ಣ ಏನು ಹೇಳಿದ್ದಾನೆ. ನೀವು ಒಪ್ಪೋದಾದ್ರೆ, ಪ್ರತಿಯೊಂದು ದೇಹದಲ್ಲಿರುವವನು ನಾನು ಎಂಬ ಸಿದ್ಧಾಂತ ಅದನ್ನು ಜಗತ್ತು ಒಪ್ಪಿ ಆಗಿದೆ. ನಮಗೆ ಗೊತ್ತಿಲ್ಲ. ಪ್ರತಿಯೊಂದು ದೇಹದಲ್ಲಿರುವವನು ನಾನು ಅಂತ ಅವ ಹೇಳಿದ್ದಾನೆ. ಅಲ್ವ? ಗುರು ಸ್ಥಾನದಲ್ಲಿ ಅವ ಒಳಗೆ ಇದ್ದಾನೆ. ಹೊರಗಿನ ಗುರು ನಿಮಗೆ ಸಿಕ್ಕೋದಿಲ್ಲ. ಸಿಕ್ಕೋದು ಅವ. ಅದಕ್ಕಾಗಿ ಮನಸ್ಸನ್ನು ಅಂತರ್ಮುಖ ಮಾಡಿ ನೀವು ನಿಮ್ಮನ್ನು ನೋಡಿ ಅಂತ ಹೇಳೋದು ನಾವು ಅದಕ್ಕೇನೆ. ಒಳಗೇ ಇದ್ದಾನೆ. ಗುರು ಎಲ್ಲಿದ್ದಾನೆ? ಭಗವಂತ ಅವನನ್ನು ಹುಡುಕಿಕೊಂಡು ಹೋಗೋದೆಲ್ಲಿ? ಎಲ್ಲಿದ್ದಾನೆ ಅಂತ ಹೇಳಿ? ಅ್ಞಂ! ಅವನು ಸಣ್ಣ ರೂಪದಲ್ಲಿ ಅವ ಇದ್ದಾನೆ ಒಳಗೆ. ಪ್ರತಿಯೊಂದು ದೇಹದಲ್ಲಿ ಅವ ಇದ್ದಾನೆ.

ರಾಧಿಕ – ಅವನಿಗೂ ಹೆಸರು ಗುರು ಅಲ್ವ ಅಜ್ಜ?

ಅಜ್ಜ – ಉಮ್ಮ. ಅದೇನೋ ಗೊತ್ತಿಲ್ಲ. ನಮಗ್ಹ್ಯಾಗೆ ಗೊತ್ತಪ್ಪ ಅದೆಲ್ಲ? ಹ್ಯಾಗೆ ಗೊತ್ತು? ಗೊತ್ತಿದ್ದರೆ ಎಲ್ಲರಿಗೂ ಇರಬೇಕು. ಗುರು ಖಾಲಿ. ನಮ್ಮ ಸಿದ್ಧಾಂತ ಉಂಟು ಪ್ರತಿಯೊಬ್ಬರೂ ಖಾಲಿಯಾಗಿ ಅಂತ ಹೇಳೋದು. ಹಾಗಾಗಬೇಕಾದ್ರೆ, ಹೇಳಬೇಕಾದ್ರೆ ಇವ್ನು ಮೊದ್ಲು ತಾನಾಗದೆ ಇನ್ನೊಬ್ಬನಿಗೆ ಹೇಳಿದರೆ ಅದು ಉಪದೇಶವಾಯ್ತು, ಪ್ರವಚನ ಏನೆಲ್ಲ ಆಯ್ತು. ಆಗ್ಬೇಕು ಮೊದ್ಲು ಖಾಲಿಯಾಗಿ.

ಆ ಒಂದಕ್ಕೆ ಈವರೆಗೆ ಕೊಟ್ಟದ್ದಲ್ಲ. ಈಗ ಒಂದು ಪದ್ಯವನ್ನು ನಾವು ಹೇಳಿ ಇದ್ಮಾಡಿ, ನೋಡಿ ಅದಕ್ಕೆ ಎಲ್ರೂ ಭಾಗಿಯಾಗ್ಬೇಕು. ನಾವು ಒಂದು ಶಬ್ದ. ಬಂದು ಇದನ್ನು ನೋಡುವ, ನಾಳೆ ನೋಡುವ.

ನೀವು ಬಂದದ್ದು ನಮಗೆ ಭಾರೀ – – – ನಮಗೆ ವಿಚಾರವಾದಿಗಳು ಬೇಕು. ಇವಳೂ ವಿಚಾರವಾದಿಯೇ. ಇನ್ನು ಮುಂದೆ ವಿಚಾರವಾದಿಗಳು ಬೇಕು. ಯಾಕೇಂದ್ರೆ ಶೋಧನೆ ಮಾಡ್ಲಿಕ್ಕೆ, ನಾವು ಈಗ ಹೇಳುವ ಮಾತುಗಳನ್ನು. ಈ ಕೆಲವು ಕ್ಯಾಸೆಟ್ಟುಗಳನ್ನು ಮಾಡಿದ್ದಾರೆ. ನಾಳೆ ನಾಡ್ದು ಬರೀಬೇಕು. ಆದ್ರಿಂದ ಸರಿಯಾಗಿ ಮಾಡಿ. – – – ಆದ್ರಿಂದ ತರ್ಲೆಕ್ಕೆ ಹೇಳಿ. ನಾಳೆ ತರ್ಲೆಕ್ಕೆ ಹೇಳಿ. ಅದು ಸರಿ ಮಾಡಿ ತಿದ್ದಿ ಕೊಡ್ಬೇಕಲ್ಲ. ಬಿಡುಗಡೆ ಅಂತ್ಹೇಳಿ ಅಲ್ಲ. ಅದು ಮಾಡದೆ ತಕೊಂಡು ಹೋದ್ರೂ ಕೂಡ ನಾವು ಅದು pass ಮಾಡೋದಿಲ್ಲ. ಯಾಕೇಂದ್ರೆ ನಾವು ಕಲ್ತು ಏನೂ ಹೇಳುವಂಥದ್ದಲ್ಲ. ಇದು ನಮ್ಮದು ಮಾತೂ ಅಲ್ಲ. ಆ ಒಳಗಿರುವ ಶಕ್ತಿಯು ಇದು ಕೊಟ್ಟು ಅದು ಮಾತುಗಳನ್ನು ಕ್ರಯಕೊಟ್ಟ ಸಾಮಾನಾದರೂ ಕೂಡ ನಾವು ಅದನ್ನು ಕಸವೆಂದು ತೆಗ್ದು ಬಿಸಾಡಿ, ಒಳ್ಳೆಯದನ್ನು ತೆಕ್ಕೊಳ್ತೇವೆ. ಇದೇನು ಕ್ರಯಕೊಟ್ಟ ವಸ್ತು – ಮಾತುಗಳಲ್ಲ. ಆ್ಞಂ! ಅದನ್ನು ನಾವು ಶೋಧನೆ ಮಾಡಿ, ೧೦ ಜನರು ಪಾಸು ಮಾಡಿ ೧೦ ಜನರಲ್ಲಿ ಆಗಿ ಅದು ಬಂದಾಗ – – – – –

ಒಬ್ಬರು – ಯಾವ ಕಡೆ ಹೋಗ್ತಾ ಇರೋದು ಈಗ?

ಅಜ್ಜ – ಶಿವಮೊಗ್ಗ.

ಒಬ್ಬರು – ಬರೋದು ವಾಪಸ್ಸು?

ಅಜ್ಜ – ವಾಪಸ್ಸು – – – ಭವಿಷ್ಯತ್ ಹೇಳ್ಲಿಕ್ಕೆ ಬರೋದಿಲ್ಲ. ಅಲ್ಲಿಂದ ನಮ್ಮ ಬೇರೆ ಕಡೆಗೆ ಹೋಗ್ತದೆ ಮತ್ತೆ.

ಒಬ್ಬರು – ಶಿವಮೊಗ್ಗದಲ್ಲಿ ಎಲ್ಲಿ?

ಅಜ್ಜ – ಶಿವಮೊಗ್ಗದಲ್ಲಿ ಡಾ॥ಗಿರಿರಾಜ್ ಅಂತ್ಹೇಳಿ ಅವರ ಮನೆ ಗೊತ್ತಾ? Dental. ನಮ್ಮ ಲೆಕ್ಕದಲ್ಲಿ ಪ್ರತಿಯೊಬ್ಬರೂ ಸರಿಸಮಾನರು ಅಂತ ಹೇಳ್ತದೆ. ಮಾನವ ಜನಾಂಗವೇ ಸರಿ. ಒಬ್ರು ಹೆಚ್ಚು ಒಬ್ರು ಕಮ್ಮಿ ಇಲ್ಲ. ಅಂತಹವರಿದ್ದಾ . . . . . ನಾವು ಸರಿಸಮಾನರು. ಅವತಾರ ಪುರುಷನಾದ್ರೂ ನಮ್ಮ ಹಾಗೇ.

ಒಬ್ಬರು – ಸರಿಸಮಾನರಿದ್ರೆ ಪ್ರತಿಯೊಬ್ಬರೂ ಒಂದೇ ಥರ ಸಂಪಾದನೆ ಯಾಕೆ ಮಾಡೋದಿಲ್ಲ?

ಅಜ್ಜ – ಸೂಕ್ಷ್ಮ ಮತ್ತು ಕಾರಣದೇಹದ ವಿಚಾರ ಮಾತ್ರ ಹೇಳುವುದು ನಾವು. ಸರಿಸಮಾನರು. ಹೌದು ಅದೊಂದೇ. ಇದರಲ್ಲಿ – – ಒಬ್ಬ ಧನಿಕ ಇರಬಹುದು, ಒಬ್ಬ ಬಡವ ಇರಬಹುದು, ಒಬ್ಬ ವಿದ್ಯಾವಂತ ಇರಬಹುದು, ಅಕ್ಷರಜ್ಞಾನ ಇಲ್ಲದವನಿರಬಹುದು.

ಒಬ್ಬರು – ಅದ್ಯಾತಕ್ಕೆ? ಎಲ್ಲರಿಗೂ ತಲೆ ಉಂಟು, Brain ಉಂಟು, ಕೈ ಕಾಲು ಉಂಟು, ಯಾಕೆ . . ?

ಅಜ್ಜ – ಅದು ಪ್ರಕೃತಿಗೆ ಬಿಟ್ಟು ಬಿಡುವ ನಾವು. ಅದು ಪ್ರಕೃತಿದತ್ತವಾದ್ದು. ಪ್ರಕೃತಿಗೆ ಬಿಡುವ. ಅಲ್ವ?

ನಾವು ಯಾವುದೂ ಅಲ್ಲ. ಅದಕ್ಕೆ ನಾವು ಶುರುವಿಗೆ ಹೇಳಿದ್ದು. ಪ್ರಶ್ನೆ ಕೇಳು.

ಅಪ್ಪ ಕೇಳುವವನು, ಉತ್ತರ ಕೊಡುವವನು ನಾವು ನಮ್ಮನ್ನು ನೋಡಿಕೊಳ್ಬೇಕಲ್ಲಪ್ಪ. ನಾವು ಯಾರು ಉತ್ತರ ಕೊಡ್ಲಿಕ್ಕೆ? ಆ್ಞಂ! ನಾನು ಯಾವುದೂ ಅಲ್ಲ. ಇದು ನಮ್ಮ ಇಡೀ ಸಿದ್ಧಾಂತ ಅದು.

ಒಬ್ಬರು – ನಾನು ಎನ್ನುವ ಶಬ್ದ ನಿಮ್ಮಲ್ಲಿಲ್ಲ.

ಅಜ್ಜ – ತತ್ತ್ವವೂ ಇಲ್ಲ, ಏನೂ ಇಲ್ಲ. ತತ್ತ್ವ ಗೊತ್ತಿಲ್ಲದವರು ಯಾರೂ ಇಲ್ಲ. ಎಲ್ಲರಿಗೂ ತತ್ತ್ವ ಗೊತ್ತುಂಟು. ಮಂಗಳೂರು – ಸುಬ್ರಹ್ಮಣ್ಯ ಮಧ್ಯೆ ಬೆಳ್ಳಾರೆ ಅಂತ್ಹೇಳಿ ಉಂಟು. ಅಲ್ಲಿ ಒಂದು ದೇಹದಿಂದ ಮಾತುಗಳು ಬರ್ತದೆ, ಹೋಗ್ತದೆ. ರೇಡಿಯೋಲಿ ಬಂದ ಹಾಗೆ ಯಾವುದೋ ಸ್ಟೇಷನ್‌ನಿಂದ ಮಾತುಗಳು ಬರ್ತದೆ. ಅಲ್ವ? ರೇಡಿಯೋಕಾದ್ರೆ

ಬೆಲೆಯುಂಟು. ೧,೦೦೦ ರೂಪಾಯಿ, ೨,೦೦೦ ರೂಪಾಯಿ. . . . ಬೆಲೆಯುಂಟು. ಇದಕ್ಕೆ, ಈ ದೇಹಕ್ಕೆ, ಬೆಲೆ ಎಷ್ಟುಂಟು? ೫ ನಯಾಪೈಸೆಗೆ ಬೇಕಾ ಬೇಡ. ಅಲ್ಲ, ಜಡವಾಗಿ ಸಂಭವಿಸಿದಾಗ, ಇದಕ್ಕೆ ಮತ್ತೆ ೧,೦೦೦ ರೂಪಾಯಿ ಖರ್ಚುಂಟು. ಹಾಗಾದರೆ ಇದಕ್ಕೆ ಬೆಲೆ ಎಲ್ಲುಂಟು? ಅದೆ, ರೇಡಿಯೋಕ್ಕೆ ಬೆಲೆ ಉಂಟು. ನಾವು ಯಾವಾಗಲೂ ಉದಾಹರಣೆ ಕೊಡೋದುಂಟು ಇದೊಂದು ರೇಡಿಯೋ ಅಂತ್ಹೇಳಿ. ಮಾತುಗಳು ಬರ್ತದೆ. ಎಲ್ಲಿಯೋ Station ಉಂಟು. ಅದು ಮಾತುಗಳು ಬರ್ಲಿಕ್ಕೆ ಅದರಲ್ಲಿ ಇದು ಮಾಡುವ ಒಬ್ಬ ಇದು ಬೇಕು. ಹಾಗಾದರೆ ನಮ್ದು ಏನುಂಟು? ಏನೂ ಇಲ್ಲ. ಇದು ನಮ್ಮ ಸಿದ್ಧಾಂತ. ಇಡೀ ಜೀವನದ ಇದುವೇ ಅದು. ಹಾಗಾದರೆ ನಮ್ಮದೇನುಂಟು? ನಾವು ಸಾಕ್ಷಿ ರೂಪವಾಗಿ ಇಷ್ಟೇ. ಇದರ ಮೂಲಕ ನಿಮ್ಮ ವಿಚಾರಗಳನ್ನು ನೀವು ಹಾಕಿ ನೀವೇ ಪಡಕೊಳ್ಳುವಂಥದ್ದು. ನಿಮ್ಮ ಪ್ರತಿಬಿಂಬವನ್ನು ನೀವೇ ನೋಡುವಂಥದ್ದು. ಹಾಗಾದರೆ ಆ ಕನ್ನಡಿ ಅದರಲ್ಲಿ ಖಾಲಿ ಬೇಕು.

(ಜನರ ಮಾತು, ನಗು.)

ಪ್ರಕೃತಿಯಿಂದಾಚೆಗೆ ದೇವಸ್ಥಾನಕ್ಕೆ ಹೋದರೆ, ಎಲ್ಲ ಕಡೆಯಲ್ಲೂ ನಮಸ್ಕಾರ ಮಾಡೋದು, ದೇವರಿಗೆ ನಮಸ್ಕಾರ ಮಾಡೋದು, ಹೀಗಂತೆ. ನಾವು ಏನು ಹೇಳ್ತದೆ? ಹೀಗೆ ಮಾಡಿ ಅಂತ್ಹೇಳಿ. ದೇವರೇ ಇದರಿ . . . ಹೀಗೆ ಮಾಡಿಯಪ್ಪ. ಅವ ಕೊಟ್ಟರೆ ನಾವು ಇಟ್ಟುಕೊಳ್ಳೋದು. ಎಲ್ಲಿ ಇದರೊಳಗೆ? ಅಲ್ಲಿ ಹೀಗೆ, ಆ್ಞಂ! ಅಲ್ವಾ? ಇದು ಪ್ರಕೃತಿ ನಿಯಮ ಇದು. ದೇವರೇ ನಮಸ್ಕಾರ ಅಂತ ಹೇಳೋದು. ಅವ ಕೊಡ್ತಾನೆ. ನಾವು ಇಟ್ಟುಕೊಳ್ಳಲಿಕ್ಕೆ. ಈ ಇದು ಬಲವಾಗಿ ಉಂಟು. ಅದು ಹೀಗೆ ಮಾಡಿ. ಆ್ಞಂ! ಮನಸ್ಸು open ಆಗಲಿ. ನಾವು – ಇದೇ ಪ್ರಾಧಾನ್ಯ ಅಲ್ಲ ಈಗ. ನೋಡಿ ಅದಕ್ಕೆ ಇದು. ಶರಣಾಗತಿ ಎಲ್ಲವೂ ನೀನೇ. ಏನು ಆಗ್ತದೆ ಅಂತ ಕೇಳುವುದು ಬೇಡ. ಭವಿಷ್ಯತ್ ಬೇಡ ಈಗ. ಅದು ಆಮೇಲಿನ ವಿಚಾರ, ಅಲ್ವಾ?

ರಾಧಿಕ – ಅಜ್ಜ, ಹೀಗ್ಮಾಡ್ತೀವಲ್ಲ ಅಜ್ಜ, ಅದೇನಜ್ಜ?

ಅಜ್ಜ – ಅದು ಎಲ್ಲರಿಗೂ ಕಾಣ್ಲಿ ಅಂತ ಹೇಳಿ ಮಾಡೋದು.

*****